**ದೋ.ಸಾ. :43 ಪ್ರಾ.ಸಾ. : 58**

**ದಿನಾಂಕಃ 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

7. ಆನಂತರ 3 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡಿದ ನಂತರ ಆತನ ಮೈಮೇಲಿದ್ದ ಬಂಗಾರದ ಚೈನನ್ನು ಹಾಗೂ ತಾನು ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ಹಾಗೂ ತನ್ನ ಮೊಬೈಲನ್ನು ಮನೆಯಲ್ಲಿಟ್ಟುರುವುದಾಗಿ ಹಾಗೂ ತನ್ನೊಂದಿಗೆ ಬಂದರೆ, ಸದರಿ ವಸ್ತುಗಳನ್ನು ಕೊಡುವುದಾಗಿ ಹೇಳಿದ ಮೇರೆಗೆ ತನಿಖಾಧಿಕಾರಿಯು ನಮ್ಮನ್ನು 3 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 3 ನೇ ಆರೋಪಿಯು ತನ್ನ ಮನೆಯ ಒಳಗೆ ಹೋಗಿ ಒಂದು ಬಂಗಾರದ ಚೈನ್, ತಾನು ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಗಳು ಹಾಗೂ ಒಂದು ಮೊಬೈಲನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-6 ರಂತೆ ಫೋಟೊ ತೆಗೆದಿರುತ್ತೇನೆ.

8. ಆನಂತರ 2 ನೇ ಆರೋಪಿಯು ತಾನು ಕೃತ್ಯದ ಸಮಯದಲ್ಲಿ ಬಳಸಿದ ಎರಡು ಮೊಬೈಲು ಫೋನುಗಳನ್ನು ತನ್ನ ಮನೆಯಲ್ಲಿ ಇಟ್ಟಿದ್ದು, ನನ್ನೊಂದಿಗೆ ಯಾರಾದರೂ ಬಂದರೆ ಅವುಗಳನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ತನಿಖಾಧಿಕಾರಿಗಳು ನಮ್ಮನ್ನು, 2 ನೇ ಆರೋಪಿಯನ್ನು ಮತ್ತು ಪಂಚರನ್ನು 2 ನೇ ಆರೋಪಿಯ ಮನೆಯ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ 2 ನೇ ಆರೋಪಿಯು ತನ್ನ ಮನೆಯ ಒಳಗೆ ಹೋಗಿ, ಎರಡು ಮೊಬೈಲು ಫೋನುಗಳನ್ನು ತಂದು ಹಾಜರುಪಡಿಸಿದ್ದು, ಸದರಿ ಎರಡು ಮೊಬೈಲ್ ಫೋನುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-8 ರಂತೆ ಫೋಟೊ ತೆಗೆದಿರುತ್ತೇನೆ.

9. ದಿ. 27-10-2018 ರಂದು 2 ನೇ ಆರೋಪಿಯು ತಾನು ಪ್ರೇಮ್ ಕುಮಾರನನ್ನು ಕಾರವಾರದಿಂದ ಕರೆದುಕೊಂಡು ಹೋಗಲು ಬಳಸಿದ ಜೆನ್ ಕಾರನ್ನು ತೋರಿಸುವುದಾಗಿ

ಹೇಳಿದ್ದು, ಅದರಂತೆ ತನಿಖಾಧಿಕಾರಿಗಳು ನಮ್ಮನ್ನು, ಆರೋಪಿಯನ್ನು ಮತ್ತು ಪಂಚರನ್ನು ಖಾನಾಪುರದ ಚಾಸಾ-32 ರವರ ಗ್ಯಾರೇಜಿನ ಬಳಿ ಕರೆದುಕೊಂಡು ಹೋಗಿರುತ್ತಾನೆ. ಅಲ್ಲಿ ಆರೋಪಿಯು ನಿಲ್ಲಿಸಿಟ್ಟ ಜೆನ್ ಕಾರನ್ನು ತೋರಿಸಿದ್ದು, ಸದರಿ ಕಾರನ್ನು ತನಿಖಾಧಿಕಾರಿಗಳು ಪರಿಶೀಲಿಸಿದಾಗ, ಅದರಲ್ಲಿ ಕಾಗದ ಪತ್ರಗಳು ಮತ್ತು ಒಂದು ಸಾರಾಯಿ ಬಾಟಲಿ ಸಿಕ್ಕಿದ್ದು, ಅವುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-35 ಮತ್ತು 36 ರಂತೆ ಫೋಟೊ ತೆಗೆದಿರುತ್ತೇನೆ.

10. ದಿ.28-10-2018 ರಂದು 2 ನೇ ಆರೋಪಿಯು ತಾನು ಪ್ರೇಮ್ ಕುಮಾರನ ಕೊಲೆ ಮಾಡುವ ಪೂರ್ವದಲ್ಲಿ ಕತ್ತಿಯನ್ನು ಖರೀದಿಸಿದ ಅಂಗಡಿಯನ್ನು ತೋರಿಸುವುದಾಗಿ ಹೇಳಿ ನಮ್ಮನ್ನು ಕಾರವಾರದ ಸಂಡೇ ಮಾರ್ಕೆಟ್ ಅಂಗಡಿಗೆ ಕರೆದುಕೊಂಡು ಹೋಗಿ, ಚಾಸಾ-31 ರವರ ಅಂಗಡಿಯನ್ನು ತೋರಿಸಿ, ತಾನು ಇದೇ ಅಂಗಡಿಯಲ್ಲಿ ಒಂದು ಕತ್ತಿಯನ್ನು ಖರೀದಿಸಿರುವುದಾಗಿ ಹೇಳಿದ್ದು, ಅಲ್ಲಿ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-42 ರಂತೆ ಫೋಟೊ ತೆಗೆದಿರುತ್ತೇನೆ.

11. ಆನಂತರ 2 ಮತ್ತು 3 ನೇ ಆರೋಪಿತರು ತಾವು ಇನ್ನೊಂದು ಕತ್ತಿಯನ್ನು ಕುಂಬಾರವಾಡದ ಅಂಬೋಲಿಯ ಚಾಸಾ-29 ರವರ ಮನೆಯಲ್ಲಿ ಖರೀದಿಸಿರುವುದಾಗಿ ಹೇಳಿ, ನಮ್ಮನ್ನು ಚಾಸಾ-29 ರವರ ಮನೆಯ ಬಳಿ ಕರೆದುಕೊಂಡು ಹೋಗಿ, ತಾವು ಇದೇ ಮನೆಯಲ್ಲಿ ಕತ್ತಿ ಮತ್ತು ಒಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿಯನ್ನು ತಯಾರಿಸಿ ಕೊಡುವಂತೆ ನೀಡಿದ್ದು, ಆನಂತರ ಚಾಸಾ-29 ರವರು ಕತ್ತಿಯನ್ನು ಮಾಡಿಲ್ಲದ ಕಾರಣ, ಅವರ ಬಳಿ ಈಗಾಗಲೇ ತಯಾರಿಸಿಟ್ಟ ಒಂದು ಕತ್ತಿಯನ್ನು ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆ. ಆನಂತರ ಚಾಸಾ-29 ರವರು 2 ಮತ್ತು 3 ನೇ ಆರೋಪಿತರು ನೀಡಿದ್ದ ಕಬ್ಬಿಣದ ಪಟ್ಟಿಯನ್ನು ತಂದು ಹಾಜರುಪಡಿಸಿದ್ದು, ಅದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-32 ರಂತೆ ಫೋಟೊ ತೆಗೆದಿರುತ್ತೇನೆ.

12. ಆನಂತರ ದಿ. 29-10-2018 ರಂದು 3 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಸಮಯದಲ್ಲಿ ತಾನು ಚಾಸಾ-26 ರವರ ಬಳಿ ಬೈಕನ್ನು ಪಡೆದುಕೊಂಡಿದ್ದೆ ಎಂದು ಹೇಳಿದ್ದು, ಅದರಂತೆ ತನಿಖಾಧಿಕಾರಿಯು ಚಾಸಾ-26 ರವರಿಗೆ ಸದರಿ ಬೈಕನ್ನು ತಂದು ಹಾಜರುಪಡಿಸುವಂತೆ ಸೂಚನೆ ನೀಡಿದ ಮೇರೆಗೆ, ಚಾಸಾ-26 ರವರು ಬೈಕನ್ನು ತಂದು ಕಾರವಾರದ ನಗರ ಠಾಣೆಯ ಮುಂದೆ ಹಾಜರುಪಡಿಸಿದ್ದು, ಅದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಅವರ ಸೂಚನೆಯ ಮೇರೆಗೆ ನಿಪಿ-50 ರಂತೆ ಫೋಟೊ ತೆಗೆದಿರುತ್ತೇನೆ.

13. ದಿ.03-12-2018 ರಂದು ತನಿಖಾಧಿಕಾರಿಯು ನನಗೆ ಮತ್ತು ಚಾಸಾ-42 ರವರಿಗೆ 1 ನೇ ಆರೋಪಿಯ ಫೋಟೊವನ್ನು ತೋರಿಸಿ, ಆತನು ಮಡಗಾಂವ್ ನ ರೈಲ್ವೇ ನಿಲ್ದಾಣದಲ್ಲಿದ್ದಾನೆ ಎಂಬ ಬಗ್ಗೆ ಮಾಹಿತಿ ಬಂದಿದ್ದು, ಕೂಡಲೇ ಹೋಗಿ ಆತನನ್ನು ಪತ್ತೆ ಹಚ್ಚಿ ತಂದು ಹಾಜರುಪಡಿಸುವಂತೆ ಸೂಚಿಸಿದ್ದು, ಅದರಂತೆ ನಾನು ಮತ್ತು ಚಾಸಾ-42 ರವರು ಮಡಗಾವ್ ನ ರೈಲ್ವೇ ನಿಲ್ದಾಣಕ್ಕೆ ಹೋಗಿ 1 ನೇ ಆರೋಪಿಯ ಬಗ್ಗೆ ನಿಗಾವಹಿಸಿ ನೋಡಲಾಗಿ, ರಾತ್ರಿ ಸುಮಾರು 10.30 ರ ಸಮಯದಲ್ಲಿ 1 ನೇ ಆರೋಪಿಯು ಸದರಿ ರೈಲ್ವೇ ನಿಲ್ದಾಣದ ಪ್ಲಾಟ್‌ಫಾರಂ ನಂ.1 ರಲ್ಲಿ ಒಂದು ಲಗೇಜ್ ಬ್ಯಾಗ್‌ನೊಂದಿಗೆ ಕುಳಿತಿರುವುದು ಕಂಡುಬಂದಿರುತ್ತದೆ. ನಂತರ ನಾವು 1 ನೇ ಆರೋಪಿಗೆ ನಮ್ಮ ಪರಿಚಯ ಹೇಳಿ, ಆತನ ಹೆಸರು ಮತ್ತು ವಿಳಾಸ ಕೇಳಿ ತಿಳಿದುಕೊಂಡು, 1 ನೇ ಆರೋಪಿಯನ್ನ ಖಚಿತಪಡಿಸಿಕೊಂಡು ನಂತರ ಪ್ರಕರಣದ ಬಗ್ಗೆ ಆತನಿಗೆ ಮಾಹಿತಿ ನೀಡಿ, ನಮ್ಮೊಂದಿಗೆ ಬರುವಂತೆ ಹೇಳಿ, ಆತನನ್ನು ಕರೆದುಕೊಂಡು ಬಂದು, ದಿ.04-12-2018 ರಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇವೆ. ಆನಂತರ ತನಿಖಾಧಿಕಾರಿಯು 1 ನೇ ಆರೋಪಿಯ ಅಂಗಶೋಧನೆ ನಡೆಸಿ, ವಿಚಾರಣೆ ಮಾಡಿ, ಆತನ ಬಳಿಯಿದ್ದ ವಸ್ತುಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಅವರ ಸೂಚನೆಯ ಮೇರೆಗೆ ನಿಪಿ-63 ರಂತೆ ಫೋಟೊ ತೆಗೆದಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.